# ಏಕಾಗ್ರತೆಯ ಕಥೆಗಳು-2

ಸಂಗ್ರಹ: **ಡಾ. ಇ. ವಸಂತಕುಮಾರ್**

ಏಕಾಗ್ರತೆ ಎಂಬುದೊಂದು ವಿಸ್ಮಯ. ಮನಸ್ಸಿನ ಒಂದು ವಿಶಿಷ್ಟವಾದ ಸ್ಥಿತಿಯಲ್ಲಿ ಒದಗಿಬರುವ ಏಕಾಗ್ರತೆ ಅನೇಕ ಅದ್ಭುತಗಳನ್ನು ಮಾಡಬಲ್ಲುದು. ಗೀತೆಯಲ್ಲಿ ಹೇಳುವ 'ಅಭ್ಯಾಸ ಮತ್ತು ವೈರಾಗ್ಯ' ಇವುಗಳಿಂದ ಏಕಾಗ್ರತೆಯನ್ನು ಬೆಳೆಸಿಕೊಳ್ಳಬಹುದು. ಇಂಥ ಮಾನಸಿಕ ಏಕಾಗ್ರತೆಯನ್ನು ಗಳಿಸಿದ ವ್ಯಕ್ತಿಯ ವೈಶಿಷ್ಟ್ಯವೇನು? ಇದನ್ನು ತಿಳಿಸಿಕೊಡುವ ಕೆಲವು ಘಟನೆಗಳು ಇಲ್ಲಿವೆ:

### ಸೊಳ್ಳೆಯ ಕಾಟದಲ್ಲೂ ಗಾಢ ಧ್ಯಾನ

ಧ್ಯಾನ ಗಾಢವಾದಾಗ ಸಾಧಕನು ತನ್ನನ್ನು ತಾನು ಮರೆತು ಹೇಗೆ ದೇಹಭಾವವನ್ನೇ ಮರೆತುಬಿಡುತ್ತಾನೆ ಎಂಬುದನ್ನು ಸೂಚಿಸುವ ಒಂದು ಘಟನೆ ಸ್ವಾಮಿ ವಿವೇಕಾನಂದರ ಜೀವನದಲ್ಲಿದೆ:



ಶ್ರೀರಾಮಕೃಷ್ಣರಿಗೆ ಗಂಟಲಿನ ವ್ರಣ ತೀವ್ರವಾದಾಗ ಅವರನ್ನು ಕಾಶೀಪುರದ ತೋಟದ ಮನೆಯಲ್ಲಿಟ್ಟು ಶಿಷ್ಯರೆಲ್ಲರೂ ಅವರನ್ನು ನೋಡಿಕೊಳ್ಳುತ್ತಿದ್ದರು. ಆಗ ನರೇಂದ್ರ (ಸ್ವಾಮಿ ವಿವೇಕಾನಂದರ ಮೊದಲಿನ ಹೆಸರು) ಮತ್ತು ಗಿರೀಶ್‌ಚಂದ್ರ ಘೋಷ್ ತೋಟದಲ್ಲಿ ಒಂದು ಮರದ ಕೆಳಗೆ ಧ್ಯಾನ ಮಾಡಲು ಕುಳಿತರು. ಸೊಳ್ಳೆಗಳು ಕಾಡಲು ಪ್ರಾರಂಭಿಸಿದುವು. ಗಿರೀಶ್ ಸೊಳ್ಳೆ ಓಡಿಸುವುದರಲ್ಲಿ ನಿರತನಾದನು. ಇಷ್ಟು ಸೊಳ್ಳೆ ಕಾಟ ಇರುವಾಗ ನರೇಂದ್ರ ಹೇಗೆ ಧ್ಯಾನ ಮಾಡಿಯಾನು ಎಂದು ಅವನ ಕಡೆ ನೋಡಿದನು. ನೂರಾರು ಸೊಳ್ಳೆಗಳು ನರೇಂದ್ರನನ್ನು ಕಂಬಳಿ ಹೊದಿಸಿದಂತೆ, ದಟ್ಟವಾಗಿ ಅವನು ಕಾಣಿಸದಂತೆ ಮುಸುಕಿದ್ದವು! ನೋಟ ಭಯಂಕರವಾಗಿತ್ತು. ಆದರೆ ನರೇಂದ್ರ ಗಾಢ ಧ್ಯಾನದಲ್ಲಿ ಮಗ್ನನಾಗಿದ್ದನು!

### ಪಾಲ್ ಡಾಯ್ಸನ್ ಅವರೊಂದಿಗೆ ಸ್ವಾಮೀಜಿ

ಪ್ರೊಫೆಸರ್ ಪಾಲ್ ಡಾಯ್ಸನ್ ೧೮೮೯ರಿಂದ ಜರ್ಮನಿಯ ಕೀಲ್ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಇವರು, ಪ್ರೊಫೆಸರ್ ಮ್ಯಾಕ್ಸ್ ಮುಲ್ಲರ್ ಅವರಂತೆ ಸಂಸ್ಕೃತ ವಿದ್ವಾಂಸರೂ, ಭಾರತೀಯ ವೇದಾಂತ ದರ್ಶನಶಾಸ್ತ್ರಗಳಲ್ಲಿ ಅದರಲ್ಲಿಯೂ ಉಪನಿಷತ್ತುಗಳಲ್ಲಿ ಪಾರಂಗತರೂ, ಭಾರತೀಯ ಧಾರ್ಮಿಕ ಸಾಹಿತ್ಯ ಮತ್ತು ಆಧ್ಯಾತ್ಮಿಕ ಭಾವನೆಗಳ ಬಗ್ಗೆ ಗೌರವವುಳ್ಳವರೂ ಆಗಿದ್ದರು. 'ವೇದಾಂತ ಸೂತ್ರಗಳು ಮತ್ತು ಶಂಕರಾಚಾರ್ಯರ ಭಾಷ್ಯ'ವನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿ ೧೮೮೭ರಲ್ಲಿ ಪ್ರಕಟಿಸಿದ್ದರು. ಯೂರೋಪಿನ ಎಲ್ಲಾ ಭಾಷೆಗಳ ಜತೆಗೆ ರಷ್ಯನ್, ಇಂಗ್ಲಿಷ್, ಅರೆಬಿಕ್ ಭಾಷೆಯನ್ನೂ ಕಲಿತಿದ್ದರು. ೧೮೯೨ರಲ್ಲಿ ಅವರ ಮಡದಿಯೊಂದಿಗೆ ಭಾರತಕ್ಕೂ ಬಂದು ನಾಲ್ಕೈದು ತಿಂಗಳ ಕಾಲ ಭಾರತದ ಪರ್ಯಟನೆ ಮಾಡಿದ್ದರು. ೧೮೯೬ರಲ್ಲಿ ಸ್ವಾಮಿ ವಿವೇಕಾನಂದರು ಎರಡನೇ ಬಾರಿ ಇಂಗ್ಲೆಂಡಿಗೆ ಹೋದಾಗ ಪ್ರೊಫೆಸರ್ ಡಾಯ್ಸನ್, ಸ್ವಾಮೀಜಿಯವರನ್ನು ಕೀಲ್ ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸಿದ್ದರು. ನಂತರ ಸ್ವಾಮೀಜಿ ಯೂರೋಪಿನಲ್ಲಿ ಪ್ರವಾಸ ಮಾಡುತ್ತಿದ್ದಾಗ ಡಾಯ್ಸನ್ ಅವರು ಬೆಳಗಿನ ಉಪಾಹಾರಕ್ಕೆ ಸ್ವಾಮೀಜಿಯವರನ್ನು ಆಹ್ವಾನಿಸಿದರು. ಸ್ವಾಮೀಜಿ ಸೇವಿಯರ್ ದಂಪತಿಗಳೊಂದಿಗೆ ಅವರ ನಿವಾಸಕ್ಕೆ ಹೋದರು. ಆಗ ಡಾಯ್ಸನ್ನರ ವಯಸ್ಸು ೫೧ ವರ್ಷಗಳು. ಪರಸ್ಪರ ಕುಶಲೋಪರಿ ಆದ ಕೂಡಲೆ ಸ್ವಾಮೀಜಿ ಮತ್ತು ಡಾಯ್ಸನ್ ಅವರ ಸಂಭಾಷಣೆ ಸಂಸ್ಕೃತದಲ್ಲಿ ಪ್ರಾರಂಭವಾಯಿತು. ಡಾಯ್ಸನ್ ಅವರು ಮಾಡುತ್ತಿದ್ದ ಭಾಷಾಂತರಗಳಲ್ಲಿ ಸ್ವಾಮೀಜಿ ಆಸಕ್ತಿ ತೋರಿದರು. ವೇದಾಂತ ಗ್ರಂಥಗಳ ಭಾಷಾಂತರ ಮತ್ತು ವ್ಯಾಖ್ಯಾನಗಳಲ್ಲಿ ಭಾಷಾವೈಖರಿಗಿಂತ ತಿಳಿಯಾದ ನಿಖರವಾದ



ನಿರೂಪಣೆ ಮುಖ್ಯ ಎಂಬ ಸ್ವಾಮೀಜಿ ಅಭಿಪ್ರಾಯ ಪ್ರೊಫೆಸರ್ ಡಾಯ್ಸನ್ ಅವರಿಗೆ ಇಷ್ಟವಾಯಿತು. ಉಪನಿಷತ್ತುಗಳ ಕೆಲವು ಭಾಗಗಳ ಬಗ್ಗೆ ಸ್ವಾಮೀಜಿ ಸರಳವಾಗಿ ತಿಳಿಯಾಗಿ ಅಧಿಕಾರವಾಣಿಯಿಂದ ಕೊಟ್ಟ ವಿವರಣೆಗಳು ಪ್ರೊಫೆಸರ್ ಅವರ ಹೃದಯವನ್ನು ಸ್ಪರ್ಶಿಸಿದುವು. ಅವರ ಸಂಭಾಷಣೆ ಕೆಲವು ಗಂಟೆಗಳು ಸಾಗಿತು. ಒಂದೇ ಒಂದು ಬಾರಿ ಕೆಲವು ಕ್ಷಣ ಸಂಭಾಷಣೆ ನಿಂತು ಸ್ತಬ್ಧವಾಯಿತು. ಆಗ ಸ್ವಾಮೀಜಿಯವರ ಗಮನ ಇಂಗ್ಲಿಷ್ ಕವನಗಳ ಒಂದು ಪುಸ್ತಕದ ಕಡೆಗೆ ಹೋಯಿತು. ಪ್ರೊಫೆಸರ್ ಸಂಭಾಷಣೆಯನ್ನು ಮುಂದುವರಿಸುವುದಕ್ಕೆ ಸ್ವಾಮೀಜಿಯವರ ಕಡೆ ನೋಡಿ ಮಾತನಾಡಿದರು. ಆದರೆ ಸ್ವಾಮೀಜಿಯವರಿಂದ ಉತ್ತರ ಬರಲಿಲ್ಲ. ಸ್ವಾಮೀಜಿ ಪುಸ್ತಕದ ಹಾಳೆಗಳನ್ನು ತಿರುಗಿಸುತ್ತಿದ್ದರು. ನಂತರ, ತಾವು ಸಭ್ಯ ವರ್ತನೆಗೆ ಅಪಚಾರ ಮಾಡುತ್ತಿರಬಹುದೆಂಬ ಅರಿವು ಉಂಟಾದೊಡನೆ ಸ್ವಾಮೀಜಿ ಕ್ಷಮಾಪಣೆ ಕೇಳಿದರು. ಅವರು ಪುಸ್ತಕದಲ್ಲಿ ಮಗ್ನರಾಗಿದ್ದ ಕಾರಣ ತಮಗೆ ಏನೂ ಕೇಳಿಸಲಿಲ್ಲವೆಂದು ಪ್ರೊಫೆಸರ್‌ಗೆ ಹೇಳಿದರು. ಡಾಯ್ಸನ್ ಅವರು ನಂಬದಾದರು. ಸ್ವಾಮೀಜಿ, ಓದುತ್ತಿದ್ದ ಪುಸ್ತಕದಿಂದ ಪುಂಖಾನುಪುಂಖವಾಗಿ ಕವನಗಳ ದೀರ್ಘ ಪಂಕ್ತಿಗಳನ್ನು ನೆನಪಿನಿಂದ ಹೇಳತೊಡಗಿದಾಗ ಡಾಯ್ಸನ್ ಸ್ತಂಭೀಭೂತರಾದರು. ನಂತರ ಸಂಭಾಷಣೆ ಏಕಾಗ್ರತೆಯ ಕಡೆ ತಿರುಗಿತು. ''ಭಾರತದಲ್ಲಿ ಯೋಗಿಗಳು ಏಕಾಗ್ರತೆಯಲ್ಲಿ ಎಷ್ಟು ಸಿದ್ಧಿಯನ್ನು ಪಡೆಯುವರೆಂದರೆ, ಅವರ ದೇಹದ ಮೇಲೆ ಉರಿಯುತ್ತಿರುವ ಕಲ್ಲಿದ್ದಲನ್ನು ಇಟ್ಟರೂ ಅವರಿಗೆ ಅದರ ಅರಿವಾಗುವುದಿಲ್ಲ'' ಎಂದು ಸ್ವಾಮೀಜಿ ತಮ್ಮ ಅನುಭವದಿಂದ ಹೇಳಿದರು. ಅದಕ್ಕೆ ಪ್ರೊಫೆಸರ್ ಅವರು, ''ಈಗ ನಾನು ಅದನ್ನು ಸುಲಭವಾಗಿ ನಂಬುತ್ತೇನೆ'' ಎಂದರು.

## ಮೃದಂಗ ವಿದ್ವಾಂಸ ಪಾಲ್ಘಾಟ್ ಮಣಿ ಅಯ್ಯರ್

ಕೀರ್ತಿಶೇಷ ಪಾಲ್ಘಾಟ್ ಮಣಿ ಅಯ್ಯರ್ (೧೯೧೨-೧೯೮೧) ಅವರು ಪ್ರಸಿದ್ಧ ಮೃದಂಗ ವಾದಕರು. ಅವರಿಗೆ ಮದರಾಸಿನ ಮ್ಯೂಸಿಕ್ ಅಕ್ಯಾಡೆಮಿಯ 'ಸಂಗೀತ ಕಳಾನಿಧಿ' ಎಂಬ ಬಿರುದು ದೊರೆಯಿತು. ಮೃದಂಗ ವಿದ್ವಾಂಸರೊಬ್ಬರಿಗೆ ಈ ಬಿರುದು ದೊರೆತುದು ಅದೇ ಮೊದಲು. ಚೆಂಬೈ-ಚೌಡಯ್ಯ-ಮಣಿ ಈ ಮೂವರ ಸಂಗೀತ ಕಚೇರಿಗಳ ಸಂಖ್ಯೆ ಆಗಿನ ಕಾಲಕ್ಕೆ ಒಂದು ದಾಖಲೆಯಾಗಿತ್ತು. ಮಣಿ ಅಯ್ಯರ್ ಅವರ ವಿಶಿಷ್ಟ ಮೃದಂಗ ವಾದನಕ್ಕೆ ಮನಸೋತ ಕಲಾವಿದರು, ಶ್ರೋತೃಗಳು ಕಚೇರಿಯಲ್ಲಿ ಅವರಿಂದ ಎರಡು ಬಾರಿ ತನಿಯಾವರ್ತನಗಳನ್ನು ಕೇಳಿ ಸಂತೋಷಪಡುತ್ತಿದ್ದರು. ಅವರು ಮುಖ್ಯ ಕಲಾವಿದರನ್ನು ಅನುಸರಿಸುತ್ತಿದ್ದ ಶೈಲಿ ಅನನುಕರಣೀಯವಾಗಿದ್ದು, ಕಚೇರಿಗೆ ರಂಗು ತರುತ್ತಿತ್ತು. ಮೃದಂಗ ವಾದನ ಕಲೆಗೆ ಅವರ ಕೊಡುಗೆ ಅನೇಕ ರೀತಿಯದಾಗಿದೆ. ಆದರೆ ಅವರ ವಿಶಿಷ್ಟ ಕೊಡುಗೆ ಕೊರವೈ ರಚನೆಗೆ ಸಂಬಂಧಿಸಿದ್ದು ಎಂಬುದು ವಿದ್ವಾಂಸರ ಅಭಿಪ್ರಾಯ. ಕೊರವೈ ಎನ್ನುವುದು ಸಣ್ಣ ತಾಳದ ಸಂಗತಿಗಳು. ಹಾಡಿನ ಪಾದಕ್ಕೆ ಸೊಗಸಾದ ಮುಕ್ತಾಯ ನೀಡುವುದಲ್ಲದೆ ಮುಂದಿನ ಚರಣಕ್ಕೆ ಆರಂಭಿಕ ನಡೆಯನ್ನೂ ಅವು ಒದಗಿಸುತ್ತಾ ಆಪ್ಯಾಯಮಾನವಾಗಿರುತ್ತಿದ್ದುವು. ಇವನ್ನು ರಚಿಸುವುದರಲ್ಲಿ , ಅವನ್ನು ತಮ್ಮ ವಾದನದಲ್ಲಿ ಅಳವಡಿಸುವುದರಲ್ಲಿ ಮಣಿ ಅಯ್ಯರ್ ಅವರ ಮನಸ್ಸು ಯಾವಾಗಲೂ ತೊಡಗಿರುತ್ತಿತ್ತು. ಒಮ್ಮೆ ಕೆಲವು ಸಂಗೀತಗಾರರು ಅಮೆರಿಕಾ ಮತ್ತು ಕೆನಡಾ ದೇಶಗಳ ನಡುವೆ ಧುಮ್ಮಿಕ್ಕುವ ಸುಪ್ರಸಿದ್ಧ ನಯಾಗರಾ ಜಲಪಾತ ನೋಡಲು ಮಣಿ ಅಯ್ಯರ್ ಅವರನ್ನೂ ಕರೆದುಕೊಂಡು ಹೋದರು. ಎಲ್ಲರೂ ಕಾರಿನಿಂದ ಇಳಿದು ಹೊರನಡೆದರು. ಆದರೆ ಮಣಿ ಅಯ್ಯರ್ ಕಾರಿನಲ್ಲೇ ಕುಳಿತಿದ್ದರು. ಮುಂದೆ ಹೋದವರು ಹಿಂದಿರುಗಿ ಬಂದು ಆಶ್ಚರ್ಯದಿಂದ ಅವರನ್ನು ತಮ್ಮೊಡನೆ ಬರುವಂತೆ ಒತ್ತಾಯಿಸಿ ಕರೆದರು. ಅದಕ್ಕೆ ಮಣಿ ಅಯ್ಯರ್ ಹೇಳಿದರು, ''ನಯಾಗರಾ



ಜಲಪಾತ ಎಲ್ಲಿಯೂ ಹೋಗುವುದಿಲ್ಲ. ಅಲ್ಲೇ ಇರುತ್ತದೆ. ಆದರೆ, ನನ್ನ ತಲೆಯಲ್ಲಿ ಒಂದು ಕೊರವೈ ರೂಪತಾಳುತ್ತಿದೆ. ಅದು ಇನ್ನೇನು ಕೊನೆಯ ಹಂತಕ್ಕೆ ಬರುತ್ತಿದೆ. ಅದನ್ನು ಹಿಡಿದು ಗುರುತು ಹಾಕಿಕೊಳ್ಳದಿದ್ದರೆ ಅದು ಕೈಬಿಟ್ಟು ಹೋಗುತ್ತದೆ. ಆದ್ದರಿಂದ ನೀವೇ ಹೋಗಿ.'' ಅವರ ಕೊರವೈ ತಪಸ್ಸಿನ ಫಲವನ್ನು ಈಗ ಅನೇಕರ ಮೃದಂಗ ವಾದನದಲ್ಲಿ ನಾವು ಕೇಳುತ್ತಿರುವೆವು.